ಈ) ಸದ್ಯಕ್ಕೆ ಇಂಥಹ ಪ್ರಸ್ತಾವನೆ ಸರಕಾರದ ಮುಂದಿಲ್ಲ.

ಉ) ತಾಲ್ಲೂಕಿನಲ್ಲಿ ಜನತಾ ಮನೆಗಳ ಹತ್ತಿರ ಅವಶ್ಯವಿದ್ದಲ್ಲಿ ಕೊಳವೆ ಭಾವಿಗಳನ್ನು ತೆಗೆಯಲಾಗಿದೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಅಧ್ಯಕ್ಷರೇ, ಜನತಾ ಮನೆಗಳನ್ನು ಯಾರು ಫಲಾನುಭವಿಗಳಿಗೆ ಕೊಡಲಾಗಿದೆ ಅವನ್ನು ಅವರು ಬೇರೆಯವರಿಗೆ ಬಾಡಿಗೆಗೆ ಕೊಟ್ಟು ಬಾಡಿಗೆ ಪಡೆದು ಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ನೆರೆ ಹಾವಳಿಯಿಂದ ಬಸವಂದ್‌ನಲ್ಲಿ ಹಲವಾರು ಮನೆಗಳು ಬಿದುಹೋಗಿವೆ. ಬಿದ್ದು ಹೋದ ಮನೆಗಳನ್ನು ಕಟ್ಟಲು ಹೆಚ್ಚಿನ ಹಣವನ್ನು ಕೊಡಬೇಕಾಗಿದ್ದು ಆ ಬಗ್ಗೆ ನಿರ್ದಿಷ್ಟವಾದ ಆದೇಶ ಬಾರದೇ ಇರುವುದರಿಂದ ಆ ಮನೆಗಳನ್ನು ಕಟ್ಟುವುದಕ್ಕಾಗುತ್ತಿಲ್ಲ. ಈ ಬಗ್ಗೆ ಹಣ ಒದಗಿಸಬೇಕೆಂದು ನನ್ನ ಸಲಹೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ವಿಷಯಗಳ ಬಗ್ಗೆ ಪೂರ್ಣ ವಿವರಗಳನ್ನು ಮಾನ್ಯ ಸದಸ್ಯರು ಒದಗಿಸಿಕೊಟ್ಟರೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲು ನಾವು ಸಿದ್ಧರಿದ್ದೇವೆ

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಈಗಾಗಲೇ ಕಂದಾಯ ಮಂತ್ರಿಗಳಿಗೆ, ನೀರಾವರಿ ಮಂತ್ರಿಗಳಿಗೆ ವಿವರವಾದ ಮಾಹಿತಿಯನ್ನು ಕಳುಹಿಸಿದ್ದೇವೆ. ಸುಮಾರು ೫೦ ಮನೆಗಳು ಬಿದ್ದು ಹೋಗಿವೆ.

ಶ್ರೀ ಎ. ಲಕ್ಷ್ಮೀಸಾಗರ್.—ನನಗೆ ಮಾಹಿತಿಯನ್ನು ಕೊಡಿ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಟೋರ್ವೆಲ್‌ಗಳನ್ನು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಹೈಕೋರ್ಟಿನಲ್ಲಿ ಇದೆ. ಇನ್ನು ಯಾವ ಊರುಗಳಲ್ಲಿ ಜನತಾ ಮನೆಗಳನ್ನು ಕಟ್ಟಿರುವುದಿಲ್ಲ ಅಂತಹ ಊರಿನ ಜನಗಳು ಜನತಾ ಮನೆಗಳು ಇರುವ ಊರಿಗೆ ವಲಸೆ ಹೋಗುತ್ತಿದ್ದಾರೆ. ಇದನ್ನು ತಡೆಗಟ್ಟುವ ಬಗ್ಗೆ ಸರ್ಕಾರ ಏನು ನಿರ್ದಿಷ್ಟ ಕಾರ್ಯಕ್ರಮವನ್ನು ಹಾಕಿಕೊಂಡಿದೆ ?

ಶ್ರೀ ಎ. ಲಕ್ಷ್ಮೀಸಾಗರ್.—ಈ ಬಗ್ಗೆ ವಿವರ ಕೊಟ್ಟರೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

Regarding payment of pension to Labour Leaders

156. SRI S. M. ANANDA RAO (Shimoga).—Will the Minister for Labour Wakfs be pleased to state that :—

1. Whether Goverment will take action to grant pension benefit to labour leaders.

SRI AZEEZ SAIT (Minister for Labour and Wakfs).—

1. This will be examined and necessary action will be taken if found feasible. I am of the opinion that pension should be accorded and I will see that suitable action is taken in this direction.

SRI M. ANAND RAO.—It is replied that necessary action will be taken if found feasible.

SRI AZEEZ SAIT.—I have given the oral answer that it will be considered. I have called for the bio-data from some of the labour leaders who have really served the cause of labour and the moment I gather all those information action will be taken.